**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ:ಸಚುಆ/23/ಚುನಾವಣೆ/ಅಸೂ/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ:17.08.2013

## -:ಅಧಿಸೂಚನೆ:-

**ವಿಷಯ:-** ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ಮಾಧ್ಯಮಿಕ ಸಹಕಾರ ಸಂಘಗಳು ಹಾಗೂ ಫೆಡರಲ್ ಸಹಕಾರ ಸಂಘಗಳಿಗೆ ಚುನಾವಣೆ ನಡೆಸುವ ಕುರಿತು ಅಧಿಸೂಚನೆ.

**ಉಲ್ಲೇಖ:-**
1. ಆಯೋಗದ ಅಧಿಸೂಚನೆ ಸಚುಆ/ಚುನಾವಣೆ/22/2013-14, ದಿನಾಂಕ:03.07.2013.
2. ಆಯೋಗದ ಆದೇಶ ಸಂಖ್ಯೆ:ಸಚುಆ/16/2013-14 ದಿನಾಂಕ :06.08.2013

***

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 39 ಎ (1) ರಿಂದ (3) ರ ಅವಕಾಶದಂತೆ, ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಮಂಡಳಿಗಳಿಗೆ ಸಾಮಾನ್ಯ ಚುನಾವಣೆಯನ್ನು ನಡೆಸುವ ಕುರಿತು. ದಿನಾಂಕಗಳನ್ನು ನಿಗಧಿಪಡಿಸಿ ಉಲ್ಲೇಖ (1) ರಲ್ಲಿ ಕಾಣಿಸಿರುವ ಪತ್ರದಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಅದರಂತೆ ಜಿಲ್ಲಾ ಚುನಾವಣಾಧಿಕಾರಿಗಳ ನೇಮಕ, ರಿಟರ್ನಿಂಗ್ ಅಧಿಕಾರಿಗಳ ನೇಮಕ ಮಾಡುವ ಬಗ್ಗೆ ಆಯೋಗವು ಈಗಾಗಲೇ ಕ್ರಮ ಕೈಗೊಂಡಿರುತ್ತದೆ.

ಅಧಿನಿಯಮ ಪ್ರಕರಣ 39 ಎ (2) (ಬಿ) ಹಾಗೂ ಅಧಿನಿಯಮ ಪ್ರಕರಣ 39 ಎ (3) (ii) ರೀತ್ಯಾ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 26 ಮತ್ತು 26 ಎ ರೀತ್ಯಾ ಎರಡನೇ ಹಂತದಲ್ಲಿ ಮಾಧ್ಯಮಿಕ ಸಂಘಗಳಿಗೆ /ಸಹಕಾರಿಗಳಿಗೆ ಚುನಾವಣೆಗಳನ್ನು ನಡೆಸುವುದಕ್ಕಾಗಿ ಚುನಾವಣೆ ಪ್ರಕ್ರಿಯೆಯು ಪ್ರಾಥಮಿಕ ಸಂಘಗಳ ಚುನಾವಣೆಗಳು ಪೂರ್ಣಗೊಂಡ 15 ದಿನಗಳ ತರುವಾಯ ಪ್ರಾರಂಭವಾಗತಕ್ಕದ್ದಾಗಿದೆ. ಹಾಗೂ ಮಂಡಳಿ ಚುನಾವಣೆಗಳನ್ನು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು 2013 ರ ಅಕ್ಟೋಬರ್ 31ನೇ ದಿನಕ್ಕೆ ಮುಂಚೆ ನಡೆಸತಕ್ಕದ್ದಾಗಿದೆ.

ಅಲ್ಲದೇ ಅಧಿನಿಯಮ ಪ್ರಕರಣ 39 ಎ (2) (ಸಿ) ದ ಅವಕಾಶದಂತೆ ಮೂರನೇ ಹಂತದಲ್ಲಿ, ಫೆಡರಲ್ ಸಂಘಗಳ ಚುನಾವಣೆಗಳನ್ನು ನಡೆಸುವುದಕ್ಕೆ ಚುನಾವಣಾ ಪ್ರಕ್ರಿಯೆಯು ಮಾಧ್ಯಮಿಕ ಸಂಘಗಳ ಚುನಾವಣೆಗಳು ಪೂರ್ಣಗೊಂಡ 30 ದಿನಗಳ ತರುವಾಯ ಪ್ರಾರಂಭವಾಗತಕ್ಕದ್ದಾಗಿದೆ. ಹಾಗೂ ಅಧಿನಿಯಮ ಪ್ರಕರಣ 39 ಎ (3) (iii) ರೀತ್ಯಾ ಫೆಡರಲ್ ಸಂಘಗಳಿಗೆ ಚುನಾವಣೆಗಳನ್ನು 2013 ರ ನವೆಂಬರ್ 30ನೇ ದಿನಕ್ಕೆ ಮುಂಚೆ ನಡೆಸತಕ್ಕದ್ದಾಗಿದೆ. ಅಲ್ಲದೇ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 26(4) (ಸಿ), ಪ್ರಕರಣ 26 ಎ ರೀತ್ಯಾ ಒಕ್ಕೂಟ ಸಹಕಾರಿ ಚುನಾವಣೆಯು ದಿನಾಂಕ:30.11.2013 ರೊಳಗೆ ನಡೆಸತಕ್ಕದ್ದಾಗಿದೆ.

ಎರಡು ಮತ್ತು ಮೂರನೇ ಹಂತದಲ್ಲಿ ಮಾಧ್ಯಮಿಕ ಸಂಘಗಳಿಗೆ ಹಾಗೂ ಫೆಡರಲ್ ಸಂಘಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 2(i-1) ರ ಅವಕಾಶದಂತೆ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಿಸಲು ಅವಕಾಶವಿದ್ದು, ಮೇಲ್ಕಂಡ ವರ್ಗಗಳ ಸಹಕಾರ ಸಂಘಗಳಿಗೆ ಚುನಾವಣೆಗಳನ್ನು ನಡೆಸಲು ಉಲ್ಲೇಖ (2) ರಲ್ಲಿ ಕಾಣಿಸಿರುವ ಪತ್ರದಲ್ಲಿ ರಾಜ್ಯದ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳನ್ನು ಜಿಲ್ಲಾ ಚುನಾವಣಾಧಿಕಾರಿಗಳನ್ನಾಗಿ ನೇಮಿಸಿ ಈಗಾಗಲೇ ಆದೇಶ ಹೊರಡಿಸಿದೆ.

----2

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 13 ಡಿ (2) ರ ಅವಕಾಶದಂತೆ ಸಹಕಾರಿ ಚುನಾವಣಾ ಆಯೋಗವು ಜಿಲ್ಲಾ ಚುನಾವಣಾಧಿಕಾರಿಯಿಂದ ಸಾಮಾನ್ಯ ಚುನಾವಣೆಗಳು ಸನ್ನಿಹಿತವಾಗಿರುವ ಸಹಕಾರ ಸಂಘಗಳ ಪಟ್ಟಿಯನ್ನೊಳಗೊಂಡ ಅಂದರೆ ಜಿಲ್ಲಾ ಚುನಾವಣಾಧಿಕಾರಿಗಳಿಂದ ಅಂಥ ವರದಿಗಳು ಸ್ವೀಕೃತವಾದ ನಂತರ, ಜಿಲ್ಲೆಯೊಳಗಿನ ಪ್ರತಿ ಸಂಘದ ಹೆಸರು / ವಿಳಾಸ ಹಾಗೂ ಸಾಮಾನ್ಯ ಚುನಾವಣೆಯ ದಿನಾಂಕ ಮತ್ತು ಸ್ಥಳಗಳನ್ನು ತಿಳಿಸುವ, ಆಡಳಿತ ಮಂಡಳಿಗಳ ಸಾಮಾನ್ಯ ಚುನಾವಣೆಗಳನ್ನು ನಡೆಸುವ ಮತ್ತು ಮತದಾರರ ಪಟ್ಟಿಗಳನ್ನು ತಯಾರಿಸುವ ಸಂಬಂಧದಲ್ಲಿ ವೇಳಾಪಟ್ಟಿಗಳನ್ನು ಪ್ರಕಟಿಸತಕ್ಕದ್ದು ಎಂದಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2012 ರ ಪ್ರಕರಣ 39 ಎ ಹಾಗೂ 39ಎಎ ರೀತ್ಯಾ ಯಾವುದೇ ಆಕಸ್ಮಿಕ ಖಾಲಿ ಸ್ಥಾನವನ್ನು ಒಳಗೊಂಡಂತೆ ಸಹಕಾರ ಸಂಘಗಳ ಮಂಡಳಿಯ ಸದಸ್ಯರ ಸಾಮಾನ್ಯ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸತಕ್ಕದ್ದಾಗಿದೆ. ರಾಜ್ಯದಲ್ಲಿನ ಸಹಕಾರ ಸಂಘಗಳಿಗೆ ನಡೆಯುವ ಎಲ್ಲಾ ಚುನಾವಣೆಗಳನ್ನು ನಡೆಸುವಿಕೆ, ತತ್ಸಂಬಂಧಿತ ಮತದಾರರ ಪಟ್ಟಿಗಳನ್ನು ಸಿದ್ದಪಡಿಸುವ ಕಾರ್ಯವು ಸಹಕಾರಿ ಚುನಾವಣಾ ಆಯೋಗದ್ದಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳು, ಅಧಿನಿಯಮ /ನಿಯಮಗಳ ಅವಕಾಶವನ್ನು ಆಯೋಗವು ಗಣನೆಗೆ ತೆಗೆದುಕೊಂಡು ಮಾಧ್ಯಮಿಕ ಹಾಗೂ ಫೆಡರಲ್ ಸಹಕಾರ ಸಂಘಗಳು ಈ ಕೆಳಕಂಡ ದಿನಾಂಕ/ಅವಧಿಯಲ್ಲಿ ಆಡಳಿತ ಮಂಡಳಿ ಸಾಮಾನ್ಯ ಚುನಾವಣೆಯನ್ನು ನಡೆಸಲು ಆದೇಶಿಸಿದೆ. ಸಂಬಂಧಿಸಿದ ಸಹಕಾರ ಸಂಘಗಳು ಚುನಾವಣೆ ನಡೆಸುವ ಸಂಬಂಧ ಕಾನೂನಿಗೆ/ಬೈಲಾಗಳಿಗೆ ಅನುಗುಣವಾಗಿ ಅಗತ್ಯ ಕ್ರಮವಿಡತಕ್ಕದ್ದು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು/ರಿಟರ್ನಿಂಗ್ ಆಫೀಸರ್‌ಗೆ ಅಗತ್ಯ/ಮಾಹಿತಿ ದಾಖಲೆಗಳನ್ನು ಪರಿಶೀಲನೆಗೆ ನೀಡುವ ಕುರಿತು ನೆರವು ನೀಡತಕ್ಕದ್ದು.

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಮಾಧ್ಯಮಿಕ ಹಾಗೂ ಫೆಡರಲ್ ಸಹಕಾರ ಸಂಘಗಳು ಈ ಕೆಳಕಾಣಿಸಿರುವ ವರ್ಗಗಳ / ಸಂಘಗಳ ಆಡಳಿತ ಮಂಡಳಿ ಚುನಾವಣೆ ನಡೆಸುವ ಬಗ್ಗೆ ಅವಧಿ ಗೊತ್ತುಪಡಿಸಲಾಗಿದೆ.

| ಕ್ರಸಂ | ಸಹಕಾರ ಸಂಘಗಳ ವರ್ಗ | ಚುನಾವಣೆ ನಡೆಸಲು ಗೊತ್ತುಪಡಿಸಿದ ದಿನಾಂಕ/ಅವಧಿ |
|---|---|---|
| 1 | ಅಧಿನಿಯಮ ಪ್ರಕರಣ 39ಎ(2)(ಬಿ) ಮತ್ತು ಪ್ರಕರಣ 39ಎ(3)(ii) ರೀತ್ಯಾ ಹಾಗೂ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 26(4) (ಬಿ)<br>ಎರಡನೇ ಹಂತ – ಮಾಧ್ಯಮಿಕ ಸಹಕಾರ ಸಂಘಗಳು/ ಮಾಧ್ಯಮಿಕ ಸಹಕಾರಿಗಳು | ದಿನಾಂಕ:10-10-2013 ರಿಂದ 15-10-2013 ರ ಈ ಅವಧಿಯಲ್ಲಿ ಸಂಘಕ್ಕೆ ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸ ತಕ್ಕದ್ದಾಗಿದೆ. |
| 2 | ಅಧಿನಿಯಮ ಪ್ರಕರಣ 39ಎ(2)(ಸಿ) ಮತ್ತು ಪ್ರಕರಣ 39ಎ(3)(iii) ಹಾಗೂ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 26(4)(ಸಿ) – ಫೆಡರಲ್ ಸಂಘಗಳು ಮೂರನೇ ಹಂತ – ಫೆಡರಲ್ ಸಂಘಗಳು/ಒಕ್ಕೂಟ ಸಹಕಾರಿ | ದಿನಾಂಕ:10-11-2013 ರಿಂದ 15-11-2013 ರ ಈ ಅವಧಿಯಲ್ಲಿ ಸಂಘಕ್ಕೆ ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |

i. ಚುನಾವಣೆಗಳನ್ನು ನಡೆಸುವುದಕ್ಕಾಗಿ ಮತ್ತು ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವುದಕ್ಕಾಗಿ ತಗಲುವ ವೆಚ್ಚವನ್ನು ಸಂಬಂಧಿಸಿದ ಸಂಘಗಳೇ ಭರಿಸತಕ್ಕದ್ದು.

ii. ಪದಾವಧಿ ಮುಗಿದ ಸಂಘಗಳು, ಕೂಡಲೇ ಚುನಾವಣಾ ಆಯೋಗಕ್ಕೆ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಿಗೆ ವರದಿ ಸಲ್ಲಿಸತಕ್ಕದ್ದು. ಸಹಕಾರ ಚುನಾವಣಾ ಆಯೋಗವು /ಜಿಲ್ಲಾ ಚುನಾವಣಾಧಿಕಾರಿಗಳು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಿಸಿದ ಸಂಘಗಳ ಆಡಳಿತ ಮಂಡಳಿ ಹಾಗೂ ಮುಖ್ಯ ಕಾರ್ಯನಿರ್ವಾಹಕರು ಅವಶ್ಯಕವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದು.

iii. ಜಿಲ್ಲಾ ಚುನಾವಣಾಧಿಕಾರಿಯು ನಿಯಮ 14 ರೀತ್ಯಾ ಚುನಾವಣೆ ಸಂಬಂಧ ನಮೂನೆ XI ರಲ್ಲಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು.

iv. ಆ ನಂತರ ರಿಟರ್ನಿಂಗ್ ಅಧಿಕಾರಿಯು ಉದ್ದೇಶಿತ ಚುನಾವಣೆ ಸಂಬಂಧ ನಮೂನೆ XII ರಲ್ಲಿ 'ನಿಯಮ 14(3)' ರ ಚುನಾವಣಾ ನೋಟೀಸ್ ನೀಡುವ ಕುರಿತು ಜಿಲ್ಲಾ ಚುನಾವಣಾ ಅಧಿಕಾರಿ ನಿಗಾವಹಿಸತಕ್ಕದ್ದು ಮತ್ತು ಖಾತರಿ ಪಡಿಸಿಕೊಳ್ಳತಕ್ಕದ್ದು.

v. ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಸಂಬಂಧಿಸಿದ ಸಂಘಗಳ ಮತದಾರರ ಪಟ್ಟಿಗಳನ್ನು ಸಿದ್ದಪಡಿಸುವಿಕೆ ಮತ್ತು ಪರಿಶೀಲನೆ, ಚುನಾವಣೆ ಸಿಬ್ಬಂದಿ, ಮತದಾನ ವ್ಯವಸ್ಥೆ, ಮತಕೇಂದ್ರಗಳ ಪರಿಶೀಲನೆ, ಮತ ಏಣಿಕೆ ವ್ಯವಸ್ಥೆ, ಚುನಾವಣಾ ಸಾಮಗ್ರಿಗಳ ವ್ಯವಸ್ಥೆ, ಚುನಾವಣೆ ಕೆಲಸ ಕಾರ್ಯಗಳ ಉಸ್ತುವಾರಿ ಕುರಿತಂತೆ ಜಿಲ್ಲಾ ಚುನಾವಣಾಧಿಕಾರಿಗಳಾದ ಜಿಲ್ಲಾಧಿಕಾರಿಗಳಿಗೆ ಅಗತ್ಯ ಸಹಕಾರ ನೀಡತಕ್ಕದ್ದು.

vi. ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು ಮಾಧ್ಯಮಿಕ/ಫೆಡರಲ್ ಚುನಾವಣೆಗಳನ್ನು ನಡೆಸುವ ಸಂಬಂಧ ಜಿಲ್ಲೆಗಿಂತ ಹೆಚ್ಚಿನ ಕಾರ್ಯವ್ಯಾಪ್ತಿ ಹೊಂದಿರುವ ಅಂದರೆ ಸಹಕಾರ ಸಕ್ಕರೆ ಕಾರ್ಖಾನೆಗಳು, ಜಿಲ್ಲಾ ಹಾಲು ಒಕ್ಕೂಟ ಹಾಗೂ ಜಿಲ್ಲಾ ಡಿ.ಸಿ.ಸಿ ಬ್ಯಾಂಕುಗಳ ಚುನಾವಣೆ ಕೆಲಸಗಳ ಕುರಿತು ಜಿಲ್ಲಾ ಚುನಾವಣಾಧಿಕಾರಿಗಳಾದ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಅಗತ್ಯ ನೆರವು ನೀಡಲು ಸೂಚಿಸಿದೆ.

(ಎನ್.ಸಿ. ಮುನಿಯಪ್ಪ)
**ಸಹಕಾರ ಚುನಾವಣಾ ಆಯುಕ್ತರು**

**ಇವರಿಗೆ :**

1. ಜಿಲ್ಲಾಧಿಕಾರಿಗಳು, ________________ ಜಿಲ್ಲೆ ಹಾಗೂ ಜಿಲ್ಲಾ ಚುನಾವಣಾಧಿಕಾರಿ, ಮಾಧ್ಯಮಿಕ/ ಫೆಡರಲ್ ಸಂಘಗಳು
2. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು,
3. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರು,
4. ಎಲ್ಲಾ ಉಪ ವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು,
5. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಕೋಲಾರ, ಮೈಸೂರು, ಕೆ.ಸಿ.ಸಿ. ಬ್ಯಾಂಕ್ ನಿ., ಧಾರವಾಡ, ರಾಯಚೂರು, ಬೀದರ್, ಬಿ.ಡಿ.ಸಿ.ಸಿ. ಬ್ಯಾಂಕ್ ನ., ಹೊಸಪೇಟೆ, ಬಿಜಾಪುರ
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕೆ. ಎಂ. ಎಫ್., ಬೆಂಗಳೂರು
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿ., ಚಾಮರಾಜಪೇಟೆ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಹಾಪ್‌ಕಾಮ್ಸ್, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಸಕ್ಕರೆ ಕಾರ್ಖಾನೆಗಳ ಮಹಾಮಂಡಳ ನಿ., ಬೆಂಗಳೂರು
12. ಆರಕ್ಷಕ ಅಧೀಕ್ಷಕರು, ________________ ಜಿಲ್ಲೆ

**ಪ್ರತಿಯನ್ನು:-**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01
2. ಸಹಕಾರ ಸಂಘಗಳ ನಿಬಂಧಕರು, #1, ಅಲಿ ಅಸ್ಕರ್ ರಸ್ತೆ, ಬೆಂಗಳೂರು-560 052
3. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು
4. ಆರಕ್ಷಕ ಮಹಾನಿರೀಕ್ಷಕರು, ಬೆಂಗಳೂರು
5. ಅಧಿಸೂಚನೆ ಕಡತ/ರಕ್ಷಾ ಕಡತ